# ಮುಂಜಾವು
## ವಾರಪತ್ರಿಕೆ

'ಮುಂಜಾವು'

| ಚಂದಾ ದರ | | ಜಾಹೀರಾತು ದರ |
| --- | --- | --- |
| ಬಿಡಿ ಪ್ರತಿ | ೫೦ ಪೈಸೆ | (ಕಾಲಂಸೆಂ. ಮೀ. ಗೆ) |
| ವಾರ್ಷಿಕ ಚಂದಾ | ೨೦ ರೂ. | ಮುಖಪುಟದಲ್ಲಿ: ೬ ರೂ. |
| ಆಜೀವ ಚಂದಾ | ೨೦೦ ರೂ | ಇತರಪುಟಗಳಲ್ಲಿ: ೪ ರೂ |

('ದೀವಟ್ಗೆ' ಯೆಂಬ ಖಾಸಗಿ ಪ್ರಸಾರದಲ್ಲಿದ್ದ ಪತ್ರಿಕೆ.) ಸಂಪಾದಕ: ಶಿರಿಮನೆ ನಾಗರಾಜ್.

ಸಂಪುಟ ೧ ಕೊಪ್ಪ ೨೨-೮-೮೨ ಭಾನುವಾರ ಸಂಚಿಕೆ ೨ ಬೆಲೆ ೫೦ ಪೈಸೆ


## ಕೊಪ್ಪ ಕಿರಿಯ ಕಾಲೇಜಿನ ವಿಜ್ಞಾನ ವಿಭಾಗ ದಿವಾಳಿ!?

ಕೊಪ್ಪ: ಕೆಲವು ವರ್ಷಗಳ ಹಿಂದೆ ಇಲ್ಲಿನ ಕಿರಿಯ ಕಾಲೇಜು ವಿಜ್ಞಾನ ವಿಭಾಗವಲ್ಲಿ ಅತ್ಯುತ್ತಮ ಫಲಿತಾಂಶ ಪಡೆದು ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಗೆ ಪಾತ್ರವಾಗಿದ್ದಲ್ಲದೆ ಆ ವಿಭಾಗದ ರವಿಶಂಕರ ಅತ್ಯುತ್ತಮ ಅಂಕಗಳಿಕೆಗಾಗಿ ಪ್ರಶಸ್ತಿಯನ್ನೂ ಪಡೆದಿದ್ದ. ಆದರೆ ಅದೇ ವಿಭಾಗ ಇಂದು ದಿವಾಳಿಯತ್ತ ಸಾಗುತ್ತಿದೆಯೇ?

ಎರಡನೇ ವರ್ಷದ ಪಿ ಯು ಸಿ ಯಲ್ಲಿ ವಿದ್ಯಾರ್ಥಿಗಳು ಸಾರ್ವತ್ರಿಕ ಪರೀಕ್ಷೆ ಎದುರಿಸಬೇಕಾಗಿದ್ದು, ಆ ತರಗತಿಯಲ್ಲಿದ್ದ ಎಲ್ಲ ೩೫ ವಿದ್ಯಾರ್ಥಿಗಳೂ ವಲಸೆ ಹೋಗಿದ್ದಾರೆ.

[ಕೊನೆಯವನಾಗಿ ಮೊನ್ನೆಯವರೆಗೆ ಉಳಿದಿದ್ದ ಎನ್. ಸುರೇಶ್, ಒಬ್ಬನೇ ಪಾಠ ಕೇಳಲಾರದೆ – ಕಲಿಯಲಾರದೆ, ಈ ವರ್ಷ ಮನೆಯಲ್ಲೇ ಉಳಿದು, ಮುಂದಿನ ವರ್ಷ ಶೃಂಗೇರಿ ಕಾಲೇಜಿಗೆ ಸೇರುವ ನಿರ್ಧಾರ ತೆಗೆದು ಕೊಂಡಿದ್ದಾನೆ.]

ಮೊದಲ ವರ್ಷದಲ್ಲಿ ೪೨ ಜನ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಈ ವರ್ಷ ಕಾಲೇಜು ಮಟ್ಟದಲ್ಲಿ ಮಾತ್ರ ಪರೀಕ್ಷೆ. ಆದರೆ ಮುಂದೆ ಹೇಗೆ? ವಿಷಯದ ಮೂಲ ಶಿಕ್ಷಣ ದೊರೆಯುವ ಮೊದಲ ವರ್ಷವೇ ಪಾಠ ಪ್ರವಚನ ಸಮರ್ಪಕವಾಗದಿದ್ದರೆ ಎರಡನೇ ವರ್ಷ ಸಾರ್ವತ್ರಿಕ ಪರೀಕ್ಷೆ ಎದುರಿಸುವುದು ಹೇಗೆ? ಎಂಬುದು ಅವರ ಕಳವಳವಾಗಿದೆ ಎನ್ನಲಾಗಿದೆ.

### ವರ್ಗಾವಣೆ – ಖಾಲಿ ಸ್ಥಾನ

ಗಣಿತ ಶಾಸ್ತ್ರ ಕಲಿಸುವವರನ್ನು ಇಲ್ಲಿಗೆ ವರ್ಗವಾಗಿ ಇಲ್ಲದ್ದ ಹನುಮಪ್ಪನವರಿಗೆ ವರ್ಗಾವಣೆ ಕೊಡಲಾಯಿತು. ಆದರೆ, ಒರೆ ಜೀವಶಾಸ್ತ್ರ ಬರುವ ನಿರೀಕ್ಷೆಯಿಲ್ಲ ಎನ್ನಲಾಗಿದೆ. ಭೌತಶಾಸ್ತ್ರಕ್ಕೆ ಖಾಲಿ ಹುದ್ದೆಗೆ ರಜೆಯ ಮೇಲಿರುವವರನ್ನು ಇಲ್ಲಿಗೆ ವರ್ಗ ಮಾಡಿದ್ದು ಅವರು ಡಿಸೆಂಬರ್ ವರೆಗೆ ಬರುವವರಿಲ್ಲವೆಂದು ತಿಳಿದು ಬಂದಿದೆ.

ಜೀವಶಾಸ್ತ್ರಕ್ಕೆ ಒಬ್ಬ ಶಿಕ್ಷಕರು ಬಂದಿದ್ದು, ಈವರೆಗೆ ಸೇವಾರ್ಥವಾಗಿ ಆ ವಿಷಯ ಪಾಠ ಮಾಡುತ್ತಿದ್ದ ಇಲ್ಲಿನ ಚರ್ಚಿನ ಫಾದರ್ ಗಿಲ್ಬರ್ಟ್ ಪಿಂಟೋರವರು ಈಗ ಭೌತಶಾಸ್ತ್ರ ತೆಗೆದುಕೊಳ್ಳುತ್ತಿದ್ದಾರೆ. ರಸಾಯನ ಶಾಸ್ತ್ರಕ್ಕೆ ಮಾತ್ರ ಶಿಕ್ಷಕರಿದ್ದಾರೆ.

ಅಂತೂ ಎರಡೇ ವರ್ಷಗಳಲ್ಲಿ ಈ ಕಾಲೇಜಿನ ಈ 'ಸಾಧನೆ' ಊರಿಗೇ ಹೆಮ್ಮೆ ತರುವಂಥ ಸಂಗತಿಯಲ್ಲವೇ!?

### ನೆರೆಪೀಡಿತ ಪ್ರದೇಶಕ್ಕೆ ಕೇಂದ್ರಮಂತ್ರಿ ಜನಾರ್ದನ ಪೂಜಾರಿ ಭೇಟಿ

(ವರದಿ: ಹೆಚ್. ಎಸ್. ಉಮಾಶಂಕರ)

ತೀರ್ಥಹಳ್ಳಿ: ಇಲ್ಲಿನ ನೆರೆಪೀಡಿತ ಪ್ರದೇಶಗಳಿಗೆ ಆ. ೨೦ರಂದು ಭೇಟಿ ನೀಡಿದ್ದ ಕೇಂದ್ರ ಹಣಕಾಸು ಉಪಮಂತ್ರಿ ಜನಾರ್ದನ ಪೂಜಾರಿ ನೆರೆ ಸಂತ್ರಸ್ತರಿಗೆ ಶೀಘ್ರ ಪರಿಹಾರ ದೊರೆಯುವಂತೆ ಮಾಡುವ ಭರವಸೆ ಇತ್ತಿದ್ದಾರೆ.

ಮಂತ್ರಿಗಳಿಗೆ ಬಿಗಿ ರಕ್ಷಣಾ ವ್ಯವಸ್ಥೆ ಇದ್ದುದು ಕಂಡು ಬಂತು.

### ವಿಜ್ಞಾನ ಸಂಘ ಉದ್ಘಾಟನೆ

ತೀರ್ಥಹಳ್ಳಿ: ಇಲ್ಲಿನ ಪ್ರ.ದ. ಕಾಲೇಜು ವಿದ್ಯಾರ್ಥಿಗಳ "ವಿಜ್ಞಾನ ಸಂಘ"ದ ಉದ್ಘಾಟನೆ ಆ. ೧೯ರಂದು ಪ್ರಿನ್ಸಿಪಾಲ್ ಇಂದುಧರ ಪೂಜಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿದ್ದ ಜೆ. ಸಿ. ಆಸ್ಪತ್ರೆಯ ವೈದ್ಯಾಧಿಕಾರಿ ಡಾ|| ಕೆ.ಎಸ್. ಕುಮಾರೇಗೌಡ "ಕ್ಯಾನ್ಸರ್" ಕುರಿತು ಉಪನ್ಯಾಸ ಮಾಡಿದರು.

## ಕೊಪ್ಪ ಪ್ರ. ದ. ಕಾಲೇಜಿನ ತರಗತಿಗಳು ಆರಂಭ

ಕೊಪ್ಪ: ಇಲ್ಲಿನ ಹೊಸ ಪ್ರಥಮದರ್ಜೆ ಕಾಲೇಜಿನಲ್ಲಿ ಆ. ೨೦ರಿಂದ ಪಾಠಗಳು ಆರಂಭವಾಗಿವೆ. ಕಾಲೇಜು ಆರಂಭವಾದ ನಂತರ ವ್ಯವಸ್ಥೆ ಆಗಬೇಕಾದ್ದರಿಂದ ಸ್ವಲ್ಪ ತಡವಾದರೂ, ಅದಷ್ಟು ವ್ಯವಸ್ಥೆಗಳನ್ನು ಮಾಡಿಕೊಂಡೇ ಪ್ರಾರಂಭಿಸುತ್ತಿರುವುದರಿಂದ ಯಾವ ಪಾಠಗಳಿಗೆ ಏನೂ ತೊಡಕುಂಟಾಗಲಾರದೆಂದೂ ಪ್ರಿನ್ಸಿಪಾಲರು ತಿಳಿಸಿದ್ದಾರೆ.

## ವಿದ್ಯಾರ್ಥಿ ಸಂಘಕ್ಕೆ ಆಯ್ಕೆ

ಕೊಪ್ಪ: ಇಲ್ಲಿನ ಕಿರಿಯ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆ ಆ. ೧೯ರಂದು ನಡೆದು ಅಂತಿಮ ಪಿಯುಸಿಯ ಕೆ. ಕೃಷ್ಣಮೂರ್ತಿ ಕಾರ್ಯದರ್ಶಿಯಾಗಿ ಹಾಗೂ ಎಸ್ಸೆಸ್ಸೆಲ್ಸಿಯ ಕೆ ಶ್ರೀನಿವಾಸ್ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಅಧ್ಯಾಪಕ ಕಾರ್ಯದರ್ಶಿಗಳು: ಎಸ್ ಎಸ್ ವಿಶ್ವೇಶ್ವರ (ಕಾಲೇಜು), ಡಿ. ವಿ. ಚಂದ್ರಶೇಖರ್ (ಪ್ರೌಢಶಾಲೆ)

## ತೀರ್ಥಹಳ್ಳಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆ

(ನಮ್ಮ ಪ್ರತಿನಿಧಿಯಿಂದ)

ತೀರ್ಥಹಳ್ಳಿ: ಮೈಸೂರು ವಿಶ್ವವಿದ್ಯಾಲಯ ಈವರ್ಷ ಜಾರಿಗೆ ತಂದಿರುವ "ಮೂರು ವರ್ಷದ ಅಂಕ ಸಮಷ್ಟಿ ಯೋಜನೆ" (ತ್ರೀ ಇಯರ್ ಎಗ್ರಿಗೇಟ್ ಪಾಲಿಸಿ) ಯನ್ನು ವಿರೋಧಿಸಿ ಇಲ್ಲಿನ ಪ್ರಥಮದರ್ಜೆ ಕಾಲೇಜು ವಿದ್ಯಾರ್ಥಿಗಳು 'ವಿದ್ಯಾರ್ಥಿ ಕ್ರಿಯಾಸಮಿತಿ'ಯ ನೇತೃತ್ವದಲ್ಲಿ ಆಗಸ್ಟ್ ೨೦ರಂದು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಯೋಜನೆಯಂತೆ ಅಂತಿಮ ಪದವಿ ತರಗತಿಯ ದರ್ಜೆ ಘೋಷಿಸುವಾಗ ಹಿಂದಿನ ಎರಡು ವರ್ಷಗಳ ಅಂಕಗಳನ್ನು ಪರಿಗಣಿಸಲಾಗುವುದು. ಆದರೆ "ಇದರಿಂದ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗೆ ಮತ್ತು ಮುಂದಿನ ಭವಿಷ್ಯಕ್ಕೆ ಹಾನಿಯಾಗುವುದಾಗಿ" ಪರಿಗಣಿಸಿರುವ ವಿದ್ಯಾರ್ಥಿಗಳು ಆ. ೧೯ರಂದು ಎಲ್ಲಾ ಕಡೆ ಪ್ರತಿಭಟನಾ ಮೆರವಣಿಗೆ ನಡೆಸಿ ವಿ.ವಿ. ಮನವಿ ಸಲ್ಲಿಸಿದ್ದರು.

ಈ ಬಗ್ಗೆ ವರಿಷ್ಠರಿಂದ ಪ್ರತಿಕ್ರಿಯೆ ಬರದಿರುವುದರಿಂದ ಪುನಃ ಈಗ ಪ್ರತಿಭಟಿಸಿ, ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳು, ಈಗಲೂ ಸರಿಯಾದ ಪರಿಹಾರ ಸಿಕ್ಕದಿದ್ದಲ್ಲಿ ತೀವ್ರಸ್ವರೂಪದ ಚಳುವಳಿಯ ಹಾದಿಯ ಬಗ್ಗೆ ಆಲೋಚಿಸುತ್ತಿದ್ದಾರೆಂದು ಹೇಳಲಾಗಿದೆ.

## "ತೋಟ ಮತ್ತು ಬೆಳೆಯ ಆರೈಕೆ ಕ್ರಮವರಿತು ಮಾಡಿ" --ಪಿ.ಜಿ.ಗುರ್ಜರ್

ಕೊಪ್ಪ: ತೋಟದ ಬೇಸಾಯವನ್ನು ಕ್ರಮವಾಗಿ ಮಾಡಿ, ಕೊಳೆರೋಗಕ್ಕೆ ಸರಿಯಾಗಿ ಔಷಧ ಹಾಕಿಸಿ. ಆರೈಕೆ ಸರಿಯಾಗಿ ಮಾಡಿದರೆ ಮಾತ್ರ ಸರಿಯಾದ ಫಸಲು ಸಿಗುವುದು ಎಂದು ಇಲ್ಲಿನ ದೊಡ್ಡ ಕಾಫಿ–ಅಡಿಕೆ ಬೆಳೆಗಾರ ಪಿ. ಜಿ. ಗುರ್ಜರ್ ಅಡಿಕೆ ಬೆಳೆಗಾರರಿಗೆ ಸಲಹೆ ಮಾಡಿದ್ದಾರೆ.

ಆ. ೧೯ರಂದು ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಕೊಪ್ಪ ಶಾಖೆಯ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಈಗ ಅಡಿಕೆಗೆ ಒಳ್ಳೆಯ ಧಾರಣೆ ಇದ್ದರೂ ಮುಂದೆ ಅಂಥಾ ಸ್ಥಿತಿ ಇರುತ್ತದೆ ಎಂದು ಹೇಳುವಂತಿಲ್ಲ. ಈಗ ಹೇಗಾದರೂ ಸ್ವಲ್ಪ ಉಳಿತಾಯ ಮಾಡಿಕೊಳ್ಳದಿದ್ದರೆ ಮುಂದೇನಾದರೂ ಸಣ್ಣ ಗಂಡಾಂತರ ಬಂದರೂ ಎದುರಿಸಿಕೊಳ್ಳಲು ಆಗಲಿಕ್ಕಿಲ್ಲ ಎಂದು ಅವರು ಎಚ್ಚರಿಸಿದರು.

"ಬೆಲೆಗೆ ಒಂದು ಗುರಿ ಇಟ್ಟುಕೊಳ್ಳಿ, ಇನ್ನೂ ಏರಲಿ, ಮತ್ತೂ ಏರಲಿ ಎಂದು ಆಸೆ ಪಟ್ಟರೆ ಕೈ ಸುಟ್ಟು ಕೊಳ್ಳಬೇಕಾದೀತು" ಎಂದೂ ಎಚ್ಚರಿಸಿದ ಅವರು, ರೈತರು ತಮ್ಮ ಆದಾಯ ವೆಚ್ಚದ ಸರಿಯಾದ ಲೆಕ್ಕ ಇಡಬೇಕು. ಇಲ್ಲದಿದ್ದರೆ ಖರ್ಚು ಜಾಸ್ತಿಯಾಗಿ ವೃಥಾ ಸಾಲಸೋಲಕ್ಕೆ ಒಳಗಾಗಬೇಕಾಗುತ್ತದೆ ಎಂದೂ ರೈತರಿಗೆ ಬುದ್ಧಿ ಹೇಳಿದರು.

ವಿಷ್ಣುಮೂರ್ತಿ ಭಟ್ಟರ ಸ್ವಾಗತ, ಜಿ. ಎಸ್. ಶ್ರೀಕಂಠ ಅವರಿಂದ ವರದಿ ಮತ್ತು ಕೋದಂಡರಾಮಶೆಟ್ಟರಿಂದ ವಂದನಾರ್ಪಣೆ ನಡೆಯಿತು.

ನೂತನ ಸಾಲಿಗೆ ಪಿ.ಜಿ. ಗುರ್ಜರ್ (ಅಧ್ಯಕ್ಷ), ಹೆಚ್. ವಿ. ಸುಬ್ಬರಾವ್ (ಕಾರ್ಯದರ್ಶಿ), ಜಿ. ಎಸ್. ಶ್ರೀಕಂಠ (ಜಂಟಿ ಕಾರ್ಯದರ್ಶಿ) ಹಾಗೂ ೧೭ ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಯಿತು.

## "ಪ್ರತಿ ಲಯನ್ಸ್ ಶಾಖೆಗೂ ಕಡ್ಡಾಯ ಸೇವಾ ಗುರಿ"

ಕೊಪ್ಪ: ಲಯನ್ಸ್ ಕ್ಲಬ್‌ನ ಪ್ರತಿ ಶಾಖೆಯೂ ಈ ವರ್ಷ ಕಡ್ಡಾಯವಾಗಿ ಅನುಸರಿಸಬೇಕಾದ ಐದು ಕಾರ್ಯಕ್ರಮಗಳ ಪೈಕಿ ಸಿಹಿಮೂತ್ರ ರೋಗ ಕುರಿತ ತಿಳುವಳಿಕೆಯ ಪ್ರಸಾರ, ದೃಷ್ಟಿಗೆ ಸಂಬಂಧ ಪಟ್ಟಂತೆ ... ಗೆ ಸಹಯೋಗ ... ಜ್ಞಾಪಕ ಪತ್ರ ಹಚ್ಚಿ ... ಹಾಗೂ ಮಾದಕ ದ್ರವ್ಯಗಳ ಸೇವನೆಯ ಅಪಾಯಗಳ ಬಗ್ಗೆ ಪ್ರಚಾರ ಇವು ಮುಖ್ಯವಾಗಿವೆ.

ಈ ವಿಷಯವನ್ನು ಆ. ೧೯ರಂದು ಇಲ್ಲಿ ನಡೆದ ಲಯನ್ಸ್ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿಗಳ 'ಜೋನ್' ಮಟ್ಟದ ಸಮ್ಮೇಳನದಲ್ಲಿ–ಲಯನ್ಸ್ ... ದಲ್ಲಿ ... ಮಾತನಾಡಿದ ... ಫಲ ... 

ಲಯನ್ಸ್‌ಗಳಾದ ರಘುನಾಥ ಶೈ, ಪಿ.ಜಿ. ಗುರ್ಜರ್, ಎಂ. ಡಿ. ಬಾಲಕೃಷ್ಣ ಹಾಗೂ ಎಂ. ಆರ್. ಹೆಗ್ಡೆ ಭಾಷಣ ಮಾಡಿದರು.

ಎ. ಮನೋಹರ ರಾವ್ ಸ್ವಾಗತಿಸಿದರು. ಡಾ|| ಎಸ್.ಎಂ. ಶಾನಭಾಗ್ ವಂದಿಸಿದರು.

**ವೇದಿಕೆ**

# "ಹೆಣ್ಣು ಸ್ವಾವಲಂಬಿಯಾದರೆ ವರದಕ್ಷಿಣೆಯ ಪಿಡುಗು ತೊಲಗಲು ದಾರಿಯಾದೀತು"

— 'ಸಿ ರಾ ಲ'

೪-೭-೮೨ರ 'ದೀವಟಿಗೆ'ಯಲ್ಲಿ ವರದಕ್ಷಿಣೆ ಕುರಿತು ಒಂದು ಲೇಖನ ಪ್ರಕಟವಾಗಿದೆ. ಈ ವಿಷಯ ಈಗಾಗಲೇ ಸಾಕಷ್ಟು ಹಳೆಯದಾಗಿದ್ದು ಈ ಬಗ್ಗೆ ಈಗಾಗಲೇ ಪತ್ರಿಕೆಗಳು, ಸಂಘ ಸಂಸ್ಥೆಗಳು ಸಾಕಷ್ಟು ಚರ್ಚೆ ನಡೆಸಿವೆ. ವರದಕ್ಷಿಣೆ ಅಪರಾಧವೆಂದು ಪರಿಗಣಿಸುವ ಕಾನೂನು ಕೂಡ ಇದ್ದರೂ, ಇನ್ನೂ ನೇರವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆ ಕೊಡುವ ಅಥವಾ ತೆಗೆದುಕೊಳ್ಳುವ ಕ್ರಮ, ನಮ್ಮ ಸಾಮಾಜಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವೇನೋ ಎಂಬಂತೆ ಮುಂದುವರಿದುಕೊಂಡೇ ಬಂದಿದೆ. ಅದರೂ ಈಗ ಮಲೆನಾಡಿನ ಪತ್ರಿಕೆಯೊಂದರಲ್ಲಿ ಮಲೆನಾಡಿನವರೇ ಆದ ಒಬ್ಬ ಮಹಿಳೆ ಈ ವಿಷಯ ಪ್ರಸ್ತಾಪ ಮಾಡಿ, ಚರ್ಚೆಗಷ್ಟು ಅವಕಾಶ ಮಾಡಿಕೊಟ್ಟಿರುವುದರಿಂದ ಈ ಚರ್ಚೆಯಲ್ಲಿ ನನ್ನದೂ ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದೇನೆ.

ವರದಕ್ಷಿಣೆಯನ್ನು ವಿರೋಧಿಸುವ ಮೊದಲು, ವರದಕ್ಷಿಣೆಯ ಪಿಡುಗು ಪ್ರಾರಂಭವಾದ ಮತ್ತು ಬೆಳೆಯಲು ಸಹಾಯಕವಾಗಿರಬಹುದಾದ ಅಂಶಗಳನ್ನು ಗುರುತಿಸಿಕೊಂಡರೆ, ಅದಕ್ಕೊಂದು ಪರಿಹಾರ ಕಂಡು ಹಿಡಿಯಲು ಸುಲಭವಾದೀತು.

ನನಗೆ ತಿಳಿದಿರುವಂತೆ ಈಗ್ಗೆ ಸುಮಾರು ಒಂದು ನೂರು ವರ್ಷಗಳ ಕೆಳಗೆ ಕನ್ಯಾಶುಲ್ಕ ಕೊಟ್ಟು, ಹೆಣ್ಣನ್ನು ತರುವ ಪದ್ಧತಿ ಇತ್ತು. (ಈಗಲೂ ಕೆಲವು ಬುಡಕಟ್ಟು ಜನಾಂಗಗಳಲ್ಲಿ 'ತೆರ' ಕೊಟ್ಟು ಹೆಣ್ಣು ತರುವ ಪದ್ಧತಿ ಇದೆ; ಎಂದರೆ ವರದಕ್ಷಿಣೆ ಎನ್ನುವುದು ಮೇಲ್ಜಾತಿಯವರ ಅಥವಾ 'ಮುಂದುವರಿದವರು' ಎನ್ನಿಸಿಕೊಂಡವರ ಸಮಸ್ಯೆಯಾಗಿದೆ.) ಆಗಿನ ಕಾಲದಲ್ಲಿ ಕನ್ಯಾಶುಲ್ಕ ತೆತ್ತು ಹೆಣ್ಣನ್ನು ತಂದರೂ, ಹೆಣ್ಣಿನ ಸ್ಥಾನಮಾನವೇನೂ ಹಿರಿದಾಗಿರಲಿಲ್ಲ. ಹೆಂಡತಿಯನ್ನು ಗಂಡನಾದವನು ದಾಸಿಗಿಂತ ಕೀಳಾಗಿ ಕಾಣುತ್ತಿದ್ದ. ಎಂದಮೇಲೆ ಹೆಣ್ಣಿಗೆ ಗೌರವ ಜಾಸ್ತಿಯಿದ್ದು ಮದುವೆಯಾದ ಮೇಲೂ ಹೆಣ್ಣನ್ನು ಗಂಡಿಗೆ ಸಮಾನವಾಗಿ ನಡೆಸಿಕೊಳ್ಳುವ ಉದ್ದೇಶದಿಂದ ಕನ್ಯಾಶುಲ್ಕ ಕೊಡುತ್ತಿದ್ದುದಲ್ಲ. ಹೆಣ್ಣನ್ನು ಗಂಡು ನಡೆಸಿಕೊಳ್ಳುವ ರೀತಿಯನ್ನು ಕಂಡಿದ್ದ, ಸ್ವತಃ ನಡೆಸಿಕೊಂಡಿದ್ದ, ಕನ್ಯಾಪಿತೃಗಳು ಹೆಣ್ಣು ಕೊಡುವ ವಿಚಾರದಲ್ಲಿ ಚೌಕಾಸಿ ಮಾಡುತ್ತಿದ್ದುದರಿಂದ ಕನ್ಯಾಶುಲ್ಕ ತೆರುತ್ತಿದ್ದಿರಬಹುದು. ಅಂತಹ ಸ್ಥಿತಿಯಿಂದ, ವರದಕ್ಷಿಣೆಯಲ್ಲದೆ ವರೋಪಚಾರವನ್ನೂ ಕೊಟ್ಟು ಹೆಣ್ಣು ಕೊಡುವ ಮಟ್ಟಿಗೆ ಕನ್ಯಾಪಿತೃಗಳು ಬದಲಾಗಲು ಪ್ರೇರಕವಾದ ಕಾರಣಗಳು ಯಾವುವು ಎಂಬುದನ್ನು ನಾವು ಗಮನಿಸಬೇಕು.

ಮುಖ್ಯವಾಗಿ ಕಾಣಿಸುವ ಕಾರಣವೆಂದರೆ ಹೆಣ್ಣನ್ನು ಹತೋಟಿಯಲ್ಲಿಟ್ಟುಕೊಳ್ಳುವ ನೆವದಲ್ಲಿ ಗಂಡು ಕೆಲವೊಮ್ಮೆ ಹೆಣ್ಣಿನ ಸಾವಿಗೂ ಕಾರಣವಾಗುತ್ತಿದ್ದುದರಿಂದ ತಮ್ಮ ಹೆಣ್ಣು ಮಕ್ಕಳನ್ನು ಯೋಗ್ಯವಾಗಿ ಸುಖವಾಗಿ ನಡೆಸಿಕೊಳ್ಳುವ ಗಂಡಿಗೆ ಆತನ ಇಚ್ಛಾನುಸಾರ ವಿವಾಹ ಮಾಡಿಕೊಡಲು ಕನ್ಯಾಪಿತೃಗಳು ಬಯಸಿರಬಹುದು. ಇದು ಮುಂದೆ ಗಂಡಿಗೊಂದು ವರವಾಗಿ, ಗಂಡೇ ವರನಾಗಿ, ತಾನು ಗಂಡಾದ ಮಾತ್ರಕ್ಕೆ ತನಗೆ ಸಕಲ ಯೋಗ್ಯತೆಗಳೂ ಬಂದುವೆಂದು ಗಂಡು ಭಾವಿಸಲು ಕಾರಣವಾಗಿರಬಹುದೇ?

ಬೇಡ, ಬೇರೆ ರೀತಿ ಯೋಚಿಸೋಣ: "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ." ಎಂಬಂತೆ, ಮದುವೆಯಾದ ಕೂಡಲೇ ಹೆಣ್ಣನ್ನು ಸಾಕುವ ಹೊಣೆ ಗಂಡಿನದಾಗುತ್ತಿರುವುದರಿಂದ, ಸಾಕಷ್ಟು ಅನುಕೂಲವಿಲ್ಲದವರು, ವರದಕ್ಷಿಣೆಯ ಮೂಲಕ ಪಡೆದ ಹಣದಿಂದ ತಮ್ಮ ಜೀವನಕ್ಕೊಂದು ದಾರಿಮಾಡಿಕೊಳ್ಳಬಹುದೆಂದು ಯೋಚಿಸಿರಬಹುದು. ಹಾಗೆಂದುಕೊಂಡರೂ ವರದಕ್ಷಿಣೆಯ ಹಣದಿಂದ ತಮ್ಮ ಜೀವನಕ್ಕೊಂದು ದಾರಿಮಾಡಿಕೊಳ್ಳುವ ಗಂಡು ಎಷ್ಟು ಮಂದಿ ಇದ್ದಾರೆ? ಅಥವಾ ಜೀವನಕ್ಕೆ ಭದ್ರತೆಯಿಲ್ಲದ ಗಂಡಿಗೆ ಕೇವಲ ವರದಕ್ಷಿಣೆಯನ್ನೂ ಹೆಣ್ಣನ್ನೂ ಕೊಡಲು ಕನ್ಯಾಪಿತೃಗಳಾದರೂ ಸಿದ್ಧವಾಗಿದ್ದಾರೆಯೇ? ಇಲ್ಲ. ಹಣ ಹಾಗೂ ಸಾಕಷ್ಟು ಸ್ಥಿರಾಸ್ತಿ ಇದ್ದೂ ವರದಕ್ಷಿಣೆ ತೆಗೆದುಕೊಳ್ಳುವವರು ಇದ್ದಾರೆ, ಕೊಡುವವರೂ ಇದ್ದಾರೆ. ಎಂದಮೇಲೆ ಇದೊಂದು ಪ್ರತಿಷ್ಠೆಯ ವಿಷಯವಾಗಿರಬಹುದೆ? ಏನೇ ಇರಲಿ ಈಗಂತೂ ನಮ್ಮ ಕಣ್ಣ ಮುಂದೆ, ಬೇಡವೆಂದರೂ ವರದಕ್ಷಿಣೆ ಕೊಡುವವರಿದ್ದಾರೆ, ಬೇಕಾಗಿಯೇ ತೆಗೆದುಕೊಳ್ಳುವವರೂ ಇದ್ದಾರೆ. ಆದ್ದರಿಂದ ಪರಿಹಾರದ ದಾರಿ ಏನು? ಎಂದು ನೋಡೋಣ.

ಎಲ್ಲಕ್ಕೂ ಮೊದಲು ನಿವಾರಣೆಯಾಗಬೇಕಾದ ಅಂಶವೆಂದರೆ, ಮದುವೆಯಾಗದ ಹೆಣ್ಣು ಮನೆಯಲ್ಲಿದ್ದರೆ ಜನ 'ಆಡಿಕೊಳ್ಳಲು' ದಾರಿಯಾಗುತ್ತದೆಎಂದು ಭಾವಿಸುವುದನ್ನು ಕನ್ಯಾಪಿತೃಗಳು ಬಿಡಬೇಕು. ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಒಬ್ಬರಾದರೂ ಹೆಣ್ಣುಮಕ್ಕಳು ಇದ್ದೇ ಇರುತ್ತಾರಾದ್ದರಿಂದ 'ಆಡಿಕೊಳ್ಳುವ' ಪ್ರಶ್ನೆ ಉದ್ಭವಿಸಬಾರದು. ಎರಡನೆಯದಾಗಿ, ಹೆಣ್ಣಿಲ್ಲದೆ ಗಂಡಿನ ಅಥವಾ ಗಂಡಿಲ್ಲದೆ ಹೆಣ್ಣಿನ ವಿವಾಹ ಅಸಾಧ್ಯವಾದ್ದರಿಂದ ಗಂಡಿಗೇ ಸಲ್ಲುವ ಪ್ರಾಶ ಕಡಿಮೆಯಾಗಬೇಕು. ಹೀಗಾಗಬೇಕಾದ ಗಂಡಿಗಿಂತ ಹೆಣ್ಣು ಯಾವ ರೀತಿಯಲ್ಲ ಕಡಿಮೆಯಿಲ್ಲದಂತೆ ಮತ್ತು ಹೆಣ್ಣು ಸ್ವಾ ಲಂಬಿಯಾಗಿ ಬದುಕಲು ದಾರಿಯಾಗುವಂ ಹೆಣ್ಣಿಗೆ ವಿದ್ಯಾಭ್ಯಾಸ ಅಥವಾ ವೃತ್ತಿಶಿಕ್ಷ ವನ್ನು ಕೊಡಿಸಲು ಕನ್ಯಾಪಿತೃಗಳು ಪ್ರ ತ್ನಿಸಬೇಕು. ಪ್ರೇಮ ವಿವಾಹ ಅಥವ ಕಾನೂನುಗಳು ವರದಕ್ಷಿಣೆ ನಿವಾರ ಯಲ್ಲಿ ಪೂರಕ ವಿಷಯಗಳಾಗಬಹುದಾ ರೂ, ನಿರುದ್ಯೋಗಸಮಸ್ಯೆ ನಿವಾರಣೆ ಹೆಣ್ಣಿಗಾಗಲೀ ಗಂಡಿಗಾಗಲೀ ಬದುಕಿ ಭದ್ರತೆ ಒದಗಿಸುವುದು ಮತ್ತು ವರದಕ್ಷಿ ಕೊಡುವುದರಿಂದ ಅಥವಾ ತೆಗೆದುಕೊಳ್ ವುದರಿಂದ ಆಗಬಹುದಾದ ಪರಿಣಾಮಗ ಬಗ್ಗೆ ಹೆಣ್ಣು ಗಂಡುಗಳಲ್ಲಿ ಪ್ರಜ್ಞೆ ಮೂಡಿಸ ವುದು ಮುಂತಾದವು ಮೊದಲಿಗೆ ಆಗಬೇಕಾ ದ ಕಾರ್ಯಗಳು ಎಂದು ನನಗೆ ಅನ್ನಿಸ ತ್ತದೆ.

(ಇಲ್ಲಿ ಚರ್ಚಿಸದೆ ಬಿಟ್ಟ ವಿಷಯಗಳ ಇರಬಹುದು. ಕೇವಲ ಚರ್ಚೆಗೆ ಅವಕಾ ಮಾಡಿಕೊಡಲು ಇಷ್ಟು ಬರೆದಿದ್ದೇನೆ.)

# ಮನೆಯೆ ಮೊದಲ ಚಿತ್ರರಂಗ....!

"ಮೊದಲನೆ ನೋಟಕೆ ನಿನ್ನಾ ಮೇಲೆ ನನಗೆ ಮನಸಾಯ್ತು, ಮನಸಾಗಿ ಲವ್ವಾಯ್ತು...." ಎಂದು ಮಗುವೊಂದು ಹಾಡುತ್ತಿತ್ತು. ತಾಯಿ ತನ್ನ ಮಗುವಿಗೆ ಈ ಗೀತೆಯನ್ನು ಕಲಿಸುತ್ತಿದ್ದಳು.

ಇನ್ನೊಂದು ಮನೆಯಲ್ಲಿ "ನಿನ್ನ ಗಂಡೆ ಯಾರೇ? ಯಾರೂಂತ ಹೇಳಿದ್ರೆ ನಿನಗೆ ಚಾಕ್ಲೇಟ್ ಕೊಡ್ತೀನಿ, ಪೆಪ್ಪರ್ ಮೆಂಟ್ ಕೊಡ್ತೀನಿ" ಅಂತ ತಾಯಿಯೊಬ್ಬಳು ತನ್ನ ಹೆಣ್ಣು ಮಗುವಿಗೆ ಸಿಹಿಯ ಆಸೆ ತೋರಿಸಿ ಅದು ಗಂಡನ ಹೆಸರನ್ನು ಹೇಳಿಸಿ ಸಂತಸಪಡುವ ಕಾತರದಲ್ಲಿದ್ದಳು.

ಮತ್ತೊಬ್ಬಳು ತಾಯಿ ತನ್ನ ಮಕ್ಕಳಿಬ್ಬರಿಗೆ ನರ್ತನ (ಡ್ಯಾನ್ಸ್) ಹೇಳಿಕೊಡುತ್ತಿದ್ದಳು. ಅದಕ್ಕೆ ಬಳಸಿದ ಹಾಡು ಹೀಗಿತ್ತು; "ಮುತ್ತನೊಂದು ಕೊಡದಿರೆ ಚಿನ್ನ್ಮ, ಎತ್ತ ಹೋದರೂ ಬಿಡೆನು ನಿನ್ನ್ನಾ...."

ಕೆಲವು ತಾಯಿಯರು ಮಕ್ಕಳಿಗೆ ಮೊದಲ ಪಾಠಶಾಲೆಯಾದ ಮನೆಯಲ್ಲಿ ಕಲಿಸುತ್ತಿರುವ ಶಿಕ್ಷಣದ ಕೆಲವು ನಿದರ್ಶನಗಳಲ್ಲಿ ನನ್ನ ಕಿವಿಗಳು ಕೇಳಿದ ಹಾಗೂ ನನ್ನ ಕಣ್ಣುಗಳು ನೋಡಿದ ನಿದರ್ಶನಗಳು ಈ ಮೂರು.

ಈ ನಿದರ್ಶನಗಳನ್ನು ಗಮನಿಸಿದಾಗ "ಮನೆಯೆ ಮೊದಲ ಪಾಠಶಾಲೆ" ಎಂಬ ನುಡಿ ಅರ್ಥವಿಲ್ಲದ್ದೆನ್ನಿಸುತ್ತದೆ. "ಜನನಿ ತಾನೆ ಮೊದಲ ಗುರುವು" ಎಂಬ ಮಾತೂ ಅರ್ಥ ಕಳೆದು ಕೊಳ್ಳುತ್ತದೆ.

ಬದಲಾಗಿ "ಮನೆಯೆ ಮೊದಲ ಚಿತ್ರರಂಗ ಜನನಿ ತಾನೆ ನಿರ್ದೇಶಕಿಯು" ಎಂದು ಬದಲಾಯಿಸಿದರೆ ಸರಿಯಾಗಬಹುದೇನೊ?! ಮುಂದಿನ ಸತ್ಪ್ರಜೆಗಳಾಗಬೇಕಾಗಿರುವ ಇಂದಿನ ಮಕ್ಕಳು ಅ,ಆ,ಇ,ಈ ಯ ಬದಲು ಪ್ರಣಯ ಗೀತೆಗಳನ್ನೋ, ಕ್ಲಬ್‌ಡ್ಯಾನ್ಸ್‌ಗಳನ್ನೋ, ದಾಂಪತ್ಯ ಶಿಕ್ಷಣವನ್ನೋ ಕಲಿ ತರೆ ಅವರೆಂತಹ ಪ್ರಜೆಗಳಾಗುತ್ತಾರೆಂಬ ದನ್ನು ಈಗಲೇ ಊಹಿಸಬಹುದಲ್ಲವೇ?

ಮನೆಯಲ್ಲಿ ಮಕ್ಕಳನ್ನು ತಾಯಿ ಹೇ ರೂಪಿಸುತ್ತಾಳೋ ಅದರ ಮೇಲಿದೆ ಅವ ಪೂರ್ಣ ಜೀವನ. ಚಿಕ್ಕವರಿರುವಾಗಲೇ ಅ ರನ್ನು ತಿದ್ದಿ ಬೆಳೆಸಿ ಅವರ ಉತ್ತಮ ಜೀವ ನಕ್ಕೆ ಅಡಿಪಾಯ ಹಾಕಿಕೊಡಬೇಕಾದುದು ತಾಯಿಯರ ಜವಾಬ್ದಾರಿ. ಅದನ್ನು ಬಿಟ್ಟು ಸಲ್ಲದ ದುರ್ವಿದ್ಯೆಗಳನ್ನು ಕಲಿಸಿ ಮಕ್ಕ ಪೂರ್ಣ ಬಾಳನ್ನೇ ಹಾಳುಗೆಡಹುವ ಇಂತ ಹ ತಾಯಿಯರು ನಿಜಕ್ಕೂ "ಸಮಾಜ ಕಂ ಟಕ" ರು ಎನ್ನದೇ ವಿಧಿಯಿಲ್ಲ.

ವಿದ್ಯಾವಂತ ಮಹಿಳೆಯರ ಸಂಖ್ಯೆ ಹೆ ಚ್ಚಾದಂತೆ ಇಂತಹ 'ವಿಪರ್ಯಾಸ' ಗಳು ಹೆಚ್ಚುತ್ತಿರುವುದು ಶೋಚನೀಯ. ಹಿಂದೆ ತಾಯಿಯರು ಮಕ್ಕಳ ಎಲ್ಲಾರೀತಿಯ ಚಟು ವಟಿಕೆಗಳ ಬಗ್ಗೆ ಹರಿಸುತ್ತಿದ್ದ ಗಮನ ಬ ಬರುತ್ತಾ ಕಡಿಮೆಯಾಗುತ್ತಿರುವುದ ಉದಾಹರಣೆಗಳು ಬೇಕತಾನೆ? "ಇನ್ನಾ ದರೂ ಎಲ್ಲ ಮಾತೆಯರು ತಮ್ಮ ಮಕ್ಕ ಬಗೆಗೆ ಹೆಚ್ಚಿನ ಗಮನಹರಿಸಲಿ" ಎಂದು ಮ ನವಿ ಮಾಡಿಕೊಳ್ಳಬೇಕಾದ ಸಂದರ್ಭ ಒದ ಗಿದುದಕ್ಕಾಗಿ ವಿಷಾದಿಸಬೇಕಾಗಿದೆ. ‡‡

ಮಾ.ಶೇ. ಗಣಪತಿ
ಪ್ರಥಮ ಪಿ.ಯು.ಸಿ. ಕೊಪ್ಪ.

## ಮುಂದಿನ ಸಂಚಿಕೆಯಲ್ಲಿ :

೧) ಎಲ್ಲಾ ಕಡೆ 'ಹತ್ತೂ ಜನರ ಗಣ ಪತಿ'ಯನ್ನು ಕೂರಿಸಿ ಸಂಭ್ರಮವೋ ಸ ಭ್ರಮ ಮಾಡುತ್ತಾರೆ. ಇದರ ಬಗ್ಗೆ ಆ ಗ ಮುಖನಿಗೇ ಹೇಗನ್ನಿಸುತ್ತಿರಬಹುದು? —'ವೃಥಾ ಕಾಲಕ್ಷೇಪ' ವಿಭಾಗದಲ್ಲಿ ಓದಿ

**'ಗಜಮುಖನ ಅಳಲು'**

೨) ಸುಪ್ರಸಿದ್ಧ ರಷ್ಯನ್ ಕತೆಗಾ ಆ್ಯಂಟನ್ ಚೆಕಾಫನ ಕತೆಯ ಕನ್ನಡ ಭಾ ವಾನುವಾದ: **'ಕುನ್ನಿ'**, ಇತ್ಯಾದಿ

## ಓದುಗರ ಪತ್ರಗಳು

### ನಿರುದ್ಯೋಗಿ ಪದವೀಧರರ ರಿಟ್ ಅರ್ಜಿ ಬೆಂಬಲಿಸುತ್ತಿರುವ ದುಷ್ಟ ಶಕ್ತಿಗಳು

ಮಾನ್ಯರೇ,

ಸುಮಾರು ೪-೫ ವರ್ಷಗಳಿಂದ ನಡೆದು ಕೊಂಡು ಬರುತ್ತಿರುವ ಸ್ಟೈಪೆಂಡಿಯರಿ ಯೋಜನೆಯು, ನಿರುದ್ಯೋಗಿ ಪದವೀಧರರ ಅನುಕೂಲಕ್ಕಾಗಿ ನಿರ್ಮಿತಗೊಂಡ ಘನ ಸರ್ಕಾರದ ಯೋಜನೆಯಾಗಿದೆ. ಈ ಯೋಜನೆಯ ಅಭಿವೃದ್ಧಿಗೆ ಕೊಡಲಿ ಪೆಟ್ಟನ್ನು ಕೊಡುತ್ತಿರುವ ದುಷ್ಟಶಕ್ತಿಗಳ ವಿರುದ್ಧ ಘನ ಸರ್ಕಾರ, ಸವಾಲನ್ನು ವಿರೋಧಿಸಲು ಮೀನ-ಮೇಷ ಎಣಿಸುತ್ತಿರುವುದು ವಿಷಾದಕರ ಸಂಗತಿಯಾಗಿದೆ. ಖಾಯಂ ಸರ್ಕಾರಿ ನೌಕರರಂತೆ ೪-೫ ವರ್ಷಗಳ ಸೇವಾನುಭವ ಪಡೆದಿದ್ದು, ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ೧೩೪೬೭ ಮಂದಿ ಪದವೀಧರರಿಗೆ ಖಾಯಂ ನೌಕರಿ ಬಗ್ಗೆ ಆಶಾಜ್ಯೋತಿ ಬೆಳಗಿಸಿದ ಮಾನ್ಯ ಮುಖ್ಯಮಂತ್ರಿಗಳು, ಇನ್ನಾದರೂ ರಿಟ್ ಅರ್ಜಿಗೆ ಬೆಂಬಲ ಕೊಡದೆ ವಯೋಮಿತಿ ಮೀರಿದ ಸ್ಟೈಪೆಂಡಿಯರಿ ಪದವೀಧರರ ಬವಣೆಯನ್ನು ಹೋಗಲಾಡಿಸುವರೆಂದು ನಂಬೋಣವೆ?

**-ವೈ. ಜಿ. ರವಿಶಂಕರ್, ಶೃಂಗೇರಿ**

### ಕಳ್ಳತನ ತಪ್ಪಿಸಿ

ಬಸವಾನಿ ಕಟ್ಟಿಗದ್ದೆ ತಿಮ್ಮನಾಯ್ಕರ ಮಗ ಭಾಸ್ಕರಯಾನೆ ಧರ್ಮ (೨೨ ವರ್ಷ) ಜುಲೈ ಕೊನೆಯ ವಾರದಲ್ಲಿ ಬೋಳಾಪುರದ ಹರಿಜನ ಗಿಡ್ಡಯ್ಯನಿಗೆ ಸೇರಿದ ೫೦ ಕಿಲೋ ಅಕ್ಕಿಯನ್ನು ಕವಡೆ ಕಟ್ಟೆಯಿಂದ ಕದ್ದು ಇದರಲ್ಲಿ ಸುಮಾರು ೩೫ ಕಿಲೊ ಅಕ್ಕಿಯನ್ನು ಹೊಕ್ಕಳಿಕೆ ಶ್ರೀನಿವಾಸ ಭಟ್ಟ ಎಂಬುವರಿಗೆ ಮಾರಾಟ ಮಾಡಿರುತ್ತಾನೆ ಆ ನಂತರ ಆಗಸ್ಟ್‌ನಲ್ಲಿ ಆತನ ಬಗ್ಗೆ ಕವಡೆಕಟ್ಟೆ ನಾಗರಾಜ್‌ರವರು ಕೊಪ್ಪ ಠಾಣೆಗೆ ದೂರು ಸಲ್ಲಿಸಿದ್ದು ಅದರ ಮೇರೆಗೆ ಆತನನ್ನು ಬಂಧಿಸಿ ವಿಚಾರಣೆ ನಡೆಯಿಸಿರುತ್ತಾರೆ.

ಆದರೆ ಕಳೆದಸಾರೆ ಈತ ಪುನಃ ಸುಮಾರು ೩೦ ಕಿಲೊ ಅಕ್ಕಿಯನ್ನು ಹೊಕ್ಕಳಿಕೆ ವಾಸುದೇವ ಭಟ್ಟ ಎಂಬವರಲ್ಲಿಗೆ ಮಾರಲು ತಂದಿದ್ದು ಭಟ್ಟರಿಗೆ ಈತನ ಹಿಂದಿನ ಘಟನೆ ತಿಳಿದುದರಿಂದ ತೆಗೆದುಕೊಳ್ಳಲು ನಿರಾಕರಿಸಿದರು. ಆದರೆ ಅಲ್ಲಿಯೇ ಇದ್ದ ಹೊಕ್ಕಳಿಕೆಯ ಮೂವರು ಆತನನ್ನು ಹೆದರಿಸಿದಾಗ ಆತ ಅಕ್ಕಿಯನ್ನು ಅಲ್ಲಿಯೇ ಒಂದು ಹಳೆಯ ಮನೆಯೊಳಗೆ ಹಾಕಿ ಓಡಿಹೋದನು. ನಂತರ ಆ ಮೂರು ಜನ ಖದೀಮರು ಸೇರಿ ಆ ಅಕ್ಕಿಯನ್ನು ಹಂಚಿಕೊಂಡಿದ್ದಾರೆಂದು ತಿಳಿದು ಬಂದಿರುತ್ತದೆ. ಈ ಖದೀಮ ಈ ಹಿಂದೆ ತೀರ್ಥಹಳ್ಳಿ ತಾಲೂಕಿನಲ್ಲಿ ಭಾರಿ ಕಳ್ಳತನ ಮಾಡುತ್ತಿದ್ದು ಈತನ ಮೇಲೆ ಅನೇಕ ಪ್ರಕರಣ ದಾಖಲಾಗಿದೆ ಎಂದು ತಿಳಿದಿದೆ. ಆದ್ದರಿಂದ ಕೊಪ್ಪದ ಸಬ್ ಇನ್ಸ್‌ಪೆಕ್ಟರ್‌ರವರು ಆತನನ್ನು ಪತ್ತೆಹಚ್ಚಿ ಸಾರ್ವಜನಿಕರಿಗೆ ಆತನಿಂದಾಗುವ ತೊಂದರೆಯನ್ನು ನಿವಾರಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇವೆ.

-ನೊಂದ ಬೋಳಾಪುರ ಗ್ರಾಮಸ್ಥರು.

(ಮೂವರ ಹೆಸರಿದೆ)

**[ಈ ಬಗ್ಗೆ ಕೊಪ್ಪ ಪೋಲೀಸರಿಗೆ ದೂರು ಬಂದಿಲ್ಲ. ಪತ್ರಿಕೆಗಳಿಗೆ ಬರೆಯುವುದಕ್ಕೂ ಮೊದಲು ಸಂಬಂಧಪಟ್ಟ ಪೋಲೀಸರಿಗೆ ದೂರು ಕೊಡಬೇಕೆಂದು ಗ್ರಾಮಸ್ಥರಿಗೆ ನಮ್ಮ ಸಲಹೆ. ಆಗಲೂ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಪತ್ರಿಕೆಗಳಿಗೆ ತಿಳಿಸುವುದು ಸೂಕ್ತ.-ಸಂ]**

ನೆರೆ ಹಾವಳಿಯಿಂದ

## ಜಿಲ್ಲೆಯಲ್ಲಿ ೩೫ ಲಕ್ಷ ರೂ. ನಷ್ಟ

ಚಿಕ್ಕಮಗಳೂರು: ಈ ಸಾರಿಯ ನೆರೆ ಹಾವಳಿಯಿಂದ ಜಿಲ್ಲೆಯಲ್ಲಿ ಸುಮಾರು ೩೫ ಲಕ್ಷ ರೂ.ಗಳಷ್ಟು ಹಾನಿಯಾಗಿರುವುದಾಗಿ ಅಂದಾಜು ಮಾಡಲಾಗಿದೆ.

೧೬೦ ಹಳ್ಳಿಗಳಲ್ಲಿ ೫೦೬೦ ಎಕರೆ ಕೃಷಿ ಭೂಮಿ ಹಾನಿಗೀಡಾಗಿರುವುದಲ್ಲದೆ, ೧೬ ಮನೆ ಕುಸಿದು, ೪೦ ಮನೆಗಳು ರಿಪೇರಿ ಮಾಡಲಾಗದಷ್ಟು ಹಾನಿಗೊಳಗಾಗಿವೆ.

**ನ. ರಾ. ಪುರ ತಾ॥**

### ನೇರಳೆಕೊಪ್ಪ ಗ್ರಾಮದ ಸುತ್ತಮುತ್ತ ಅತಿವೃಷ್ಟಿಯಿಂದ ನಷ್ಟ

ನ. ರಾ. ಪುರ: ಈ ತಾಲೂಕಿನ ನೇರಳೆಕೊಪ್ಪ ಗ್ರಾಮದ ಸಿದ್ದರಗವಿಯಲ್ಲಿ ನೀರು ನುಗ್ಗಿ; ನರಿಗುದ್ದಿನ ಮುಂಡಗದ ಕೆರೆ ಬಲಭಾಗದ ಏರಿ ಜರಿದು ಹೋಗಿದೆ, ಅದರ ಕೆಳಗಿರುವ ೩೫ ಮತ್ತು ೩೬ ನೆಂಬರ್ ನಂಬರಿನ ಜಮೀನು ಕೊಚ್ಚಿಹೋಗಿರುವುದಾಗಿ ಪಂಚಾಯ್ತಿ ಉಪಾಧ್ಯಕ್ಷರಾದ ಎ. ಜಿ. ಬೆಳ್ಳೀಗೌಡ ತಿಳಿಸಿದ್ದಾರೆ.

ಅವರ ಮನೆಯ ೩೫ ಅಡಿ ಗೋಡೆ ಮಳೆಯ ಹೊಡೆತಕ್ಕೆ ಬಿದ್ದುಹೋಗಿದ್ದು ತಹಸೀಲ್ದಾರರು ಸ್ಥಳ ಪರಿಶೀಲನೆ ಮಾಡಿದ್ದಾಗಿ ಅವರು ತಿಳಿಸಿದ್ದಾರೆ.

ಕಡಹಿನಬೈಲು ಪಂಚಾಯ್ತಿಗೆ ಸೇರಿದ ಸೆಟ್ಟಿಕೊಪ್ಪ ಕಾಲೋನಿ ಕೆರೆ ಒಡೆದದ್ದರಿಂದ ನೇರಳೆಕೊಪ್ಪ ಗ್ರಾಮದ ಮಾವಿನಕೆರೆಗೆ ಬರುವ ಲೋಕೋಪಯೋಗಿ ಇಲಾಖೆ ರಸ್ತೆ ಒಡೆದು ಹೋಗಿದೆಯೆನ್ನಲಾಗಿದೆ.

ಮಳೆಯ ಹಾನಿಯಿದ ಕಂಗಾಲಾಗಿರುವ ಈ ಸುತ್ತಮುತ್ತಲ ಗ್ರಾಮಗಳ ರೈತರಿಗೆ ಸರ್ಕಾರ ಸೂಕ್ತ ಪರಿಹಾರ ಕೊಡಿಸಬೇಕೆಂದು ಬೆಳ್ಳೀಗೌಡರು ಒತ್ತಾಯಿಸಿದ್ದಾರೆ.

ಇದಲ್ಲದೆ, ಒಣಗಿಯಲ್ಲಿ ಹೊಸದಾಗಿ ಕಟ್ಟಿಸಿರುವ ಬಾವಿ ಕುಸಿದು ಪಕ್ಕದ ಮನೆಗೆ ತೊಂದರೆಯಾಗಿದೆ. ಒಣಗಿ ಹಳ್ಳಕ್ಕೆ ಪಂಚಾಯ್ತಿ ಹಾಕಿಸಿರುವ ಕಾಲುಸೇತುವೆ ಮಳೆಯಿಂದ ತೇಲಿಹೋಗಿದೆ. ಕೂಡಲೇ ತಾ॥ ಅಭಿವೃದ್ಧಿ ಮಂಡಳಿಯವರು ಈ ಕೆಲಸಗಳನ್ನು ಮಾಡಿಸಿಕೊಡಬೇಕು ಎಂದೂ ಬೆಳ್ಳೀಗೌಡ ಅವರು ವಿನಂತಿಸಿದ್ದಾರೆ.

**ಜಾನುವಾರು ಕಳವು**

ಸೆಟ್ಟಿಕೊಪ್ಪದ ಮಂಜಿನಕೊಪ್ಪ ತಿಮ್ಮಣ್ಣನವರ ಮನೆಯಿಂದ ರಾತ್ರಿ ಜಾನುವಾರೊಂದನ್ನು ಕದ್ದುಕೊಂಡುಹೋಗಿ ಕೊಲ್ಲಲಾಗಿತ್ತೆಂದೂ, ಆ ಊರಿನ ಕೇರಳದವರೊಬ್ಬರು ಅದನ್ನು ಒಪ್ಪಿಕೊಂಡಿದ್ದಾರೆಂದೂ ಹೇಳಲಾಗಿದ್ದು, ಈ ಬಗ್ಗೆ ಸರ್ಕಾರದ ಗಮನ ಇರಬೇಕೆಂದು ನೊಂದ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಈವರೆಗೆ ೪೯,೬೦೦ ರೂ. ಗಳಷ್ಟು ಪರಿಹಾರ ಕೊಡಲಾಗಿದೆ. ಇತರ ವೈಯಕ್ತಿಕ ನಷ್ಟದ ಅಂದಾಜು ಮುಗಿದೊಡನೆ ಇನ್ನಷ್ಟು ಪರಿಹಾರ ಧನ ಕೊಡಲಾಗುತ್ತದೆ.

ಈ ವಿವರಗಳನ್ನು ಪತ್ರಕರ್ತರಿಗೆ ಒದಗಿಸಿದ ಜಿಲ್ಲಾಧಿಕಾರಿ ಎಸ್. ಎಲ್. ಗಂಗಾಧರಪ್ಪ ಅವರು, ಜಯಪುರ ಬಳಿಯ ಎಸ್ಟೇಟ್‌ನಲ್ಲಿ ಹುಡುಗಿ ಒಬ್ಬಳು ಸಂಕ ದಾಟುತ್ತಿದ್ದಾಗ ನದಿಯಲ್ಲಿ ಕೊಚ್ಚಿ ಹೋದಳೆಂಬ ವರದಿಗಳ ಬಗ್ಗೆ ತಮಗೇನೂ ಮಾಹಿತಿ ಬಂದಿಲ್ಲವೆಂದರು.

ಇಡೀ ವರ್ಷದಲ್ಲಿ ಈ ಭಾಗದಲ್ಲಿ ಬೀಳುವ ಸರಾಸರಿ ಮಳೆಯ ಐದರಷ್ಟೊಂದು ಭಾಗ ಜು. ೩೧, ಆ. ೧ ಮತ್ತು ೨ ಈ ಮೂರು ದಿನಗಳಲ್ಲೇ ಸುರಿಯಿತೆಂದೂ ಅವರು ತಿಳಿಸಿದರು.

**ಬೇಗಾನೆ ಭರವಸೆ**

ವಾರ್ಷಿಕ ಆದಾಯ ೩,೫೦೦ ರೂ.ಗಿಂತ ಹೆಚ್ಚಿಗೆ ಇರುವವರಿಗೆ ಪರಿಹಾರ ಕೊಡುವಂತಿಲ್ಲವೆಂದು ಆದೇಶವಿದೆ. ಅದನ್ನು ಸಡಿಲಿಸಿ, ೪ ಎಕರೆ ಎಕರೆವರೆಗಿನ ಸಣ್ಣ ರೈತರಿಗೂ ಪರಿಹಾರ ದೊರಕಿಸುವ ಭರವಸೆಯನ್ನು ಬೇಗಾನೆ ರಾಮಯ್ಯ ನೀಡಿರುವುದಾಗಿ ಶೃಂಗೇರಿಯಿಂದ ವರದಿಯಾಗಿದೆ.

## ಕೊಪ್ಪ ತಾ॥ನಲ್ಲಿ ೨೦ ಲಕ್ಷ ರೂ. ನಷ್ಟ

ನೆರೆ ಹಾವಳಿಯಲ್ಲಿ ಕೊಪ್ಪ ತಾ॥ ಅತಿ ಹೆಚ್ಚು ನಷ್ಟ ಅನುಭವಿಸಿದೆ. ೯೬೩ ಎಕರೆ ವ್ಯವಸಾಯ ಭೂಮಿಯಲ್ಲಿ ಸುಮಾರು ೧೦.೪೯ ಲಕ್ಷ ರೂ; ಹಾಗೂ ನಾಶವಾದ ಮತ್ತು ಹಾನಿಗೊಳಗಾದ ಮನೆಗಳಿಂದಾಗಿ ಸು. ೧.೪ ಲಕ್ಷ; ಒಟ್ಟು ೧,೫೦೦ ರೂ. ಬೆಲೆಯ ೩ ಜಾನುವಾರು ಕಣ್ಮರೆ ಅಲ್ಲದೆ ಸರ್ಕಾರಿ ಆಸ್ತಿಪಾಸ್ತಿಗೆ ಆದ ನಷ್ಟ ಸು. ೮.೮ ಲಕ್ಷ ರೂ.-ಎಲ್ಲ ಒಟ್ಟು ಸುಮಾರು ೨೦.೬೨ ಲಕ್ಷ ರೂ. ಗಳಷ್ಟು ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ.

**ಶೃಂಗೇರಿ**

ಈ ತಾ॥ನಲ್ಲಿ ಆಗಿರುವ ಒಟ್ಟು ನಷ್ಟದ ಅಂದಾಜು ೪ ಲಕ್ಷ ೮೦ ಸಾವಿರ ರೂ. ಈಗಾಗಲೇ ೩೦ ಸಾವಿರ ರೂ.ಗಳ ಪರಿಹಾರ ಹಂಚಲಾಗುತ್ತಿದೆ. ಸುಮಾರು ೨,೫೦೦ ಎಕರೆ ಜಮೀನು ಹಾನಿಗೊಳಗಾಗಿದ್ದು, ಶೃಂಗೇರಿಯಲ್ಲಿ ೧೮, ಕಿಗ್ಗದಲ್ಲಿ ೧ ಮತ್ತು ನೆಮ್ಮಾರಿನಲ್ಲಿ ೨ ಮನೆಗಳು ಹಾನಿಗೊಳಗಾಗಿವೆ.

**ನರಸಿಂಹರಾಜಪುರ**

೫೪೦ ಕುಟುಂಬಗಳು ತೊಂದರೆಗೊಳಗಾಗಿದ್ದು ೬೦೭ ಎಕರೆ ಜಮೀನಿನ ಬೆಳೆ ಹಾಳಾಗಿದೆ; ೮ ಕೆರೆಗಳು ಒಡೆದಿವೆ. ಸುಮಾರು ೨ ಲಕ್ಷ ೬೮ ಸಾವಿರ ರೂ. ನಷ್ಟವೆಂದು ಅಂದಾಜು ಮಾಡಲಾಗಿದೆ. ೫ ಸಾವಿರ ರೂ. ತಾತ್ಕಾಲಿಕ ಪರಿಹಾರವನ್ನು ಹಂಚಲಾಗುತ್ತಿದೆ.

## ಶರೀಫ್‌ಗೆ ವರ್ಗ

**ಚಿಕ್ಕಮಗಳೂರು: ನಮೂದಿಗೆರೆಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದು, ಹಲವು ವಿವಾದಗಳಲ್ಲಿ ಸಿಕ್ಕಿಕೊಂಡಿದ್ದ ಶರೀಫ್‌ರಿಗೆ ಬೆಂಗಳೂರಿಗೆ ವರ್ಗವಾಗಿರುವುದಾಗಿ ವರದಿಯಾಗಿದೆ.**

ಪಲಿಕರ ಮೇಲಿನ ದೌರ್ಜನ್ಯಗಳ ಬಗ್ಗೆ ಪ್ರತಿಭಟಿಸಲು ಠಾಣೆಗೆ ಹೋದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಡಿ. ಗಂಗಯ್ಯನವರ ಮೇಲೆ ಅವಮಾನವೀಯವಾಗಿ ಹಲ್ಲೆ ನಡೆಸಿದ್ದ. ಇದನ್ನು ಪ್ರತಿಭಟಿಸಿ ದಸಂಸ ಮೂಡಿಗೆರೆಯಿಂದ ಚಿಕ್ಕಮಗಳೂರಿಗೆ ಬೃಹತ್ ಜಾಥಾ ನಡೆಸಿದ್ದಲ್ಲದೆ ರಾಜ್ಯಾದ್ಯಂತ ಪೋಲೀಸ್ ಮುಖ್ಯ ಕಚೇರಿಗಳೆದುರು ಸಾಂಕೇತಿಕ ಧರಣಿ ನಡೆಸಿ, ಶರೀಫರ ವರ್ಗಾವಣೆಗೆ ಒತ್ತಾಯಿಸಿತ್ತು. ಬಲಾತ್ಕಾರ ಪ್ರಸಂಗಳು ಧಾರಣೆಯ ಪ್ರಸಂಗ ಮುಂತಾದವುಗಳ ಹಿನ್ನೆಲೆಯಲ್ಲಿ ಮೂಡಿಗೆರೆಯ ಶಾಸಕಿ ಮೋಟಮ್ಮ ಶರೀಫರ ವರ್ಗಾವಣೆಗೆ ಸರ್ಕಾರವನ್ನು ಒತ್ತಾಯಿಸಿದ್ದು ಇಲ್ಲಿ ಜ್ಞಾಪಿಸಬಹುದು.

ಡಿ. ಸಿ. ಸಿ. ಬ್ಯಾಂಕ್: ಆಭರಣಗಳ ಮೇಲೆ

## ಸಾಲ ಕೊಡುವ ಸೌಲಭ್ಯ ಆರಂಭ

ಕೊಪ್ಪ: ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಚಿನ್ನಾಭರಣಗಳನ್ನು ಆಧಾರವಿಟ್ಟುಕೊಂಡು ಸಾಲ ಕೊಡುವ ಸೌಲಭ್ಯ ಹೊಸದಾಗಿ ಆರಂಭವಾಗಿದ್ದು, ಕೊಪ್ಪದಲ್ಲಿ ಇದರ ಉದ್ಘಾಟನೆ ಆಗಸ್ಟ್ ೧೮ ರಂದು ಬಿ.ಜಿ. ಚಿದಂಬರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪಿ. ಜಿ. ಗುರ್ಜರ್ ರವರು ಬ್ಯಾಂಕಿನಲ್ಲಿ ಸಾಲದ ಬಡ್ಡಿದರವನ್ನು ಈಗಿನ ಶೇಕಡ ೧೩ರಿಂದ ಕಾರ್ಪೋರೇಶನ್‌ನಲ್ಲಿರುವಂತೆ ಶೇಕಡ ೧೦ಕ್ಕೆ ಇಳಿಸುವಂತೆ ಸಲಹೆ ಮಾಡಿದರು.

ಜನರಿಗೆ ಚಿನ್ನಾಭರಣಗಳನ್ನು ಅಡವಿಟ್ಟು ಸಾಲ ಪಡೆಯಬೇಕಾದಂತಹ ಪರಿಸ್ಥಿತಿ ಬರುವುದು ಬೇಡ ಎಂದು ಸಾಲ ವಿತರಣೆ ಮಾಡಿದ ಹೆಚ್. ಜಿ. ಗೋವಿಂದಗೌಡ ಆಶಿಸಿದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳ ನಿರ್ದೇಶಕರಾಗಿರುವ ಎಂ.ಕೆ. ರಾಮಣ್ಣ ಮಾತನಾಡಿ, ಬ್ಯಾಂಕಿನ ವಹಿವಾಟು ೧.೫ ಕೋಟಿಯಿಂದ ೩ ಕೋಟಿಗೆ ಏರುತ್ತದಾಗಿ ತಿಳಿಸಿದರು. ಕೊಟ್ಟ ಸಾಲದ ಮರುಪಾವತಿ ಸಮರ್ಪಕವಾಗಿ ಆಗುತ್ತಿಲ್ಲ ಎಂದು ಅವರು ವಿಷಾದಿಸಿದರು.

ಬಿ.ಜಿ. ಚಿದಂಬರ್ ಮಾತನಾಡಿ, ಸಹಕಾರ ಬ್ಯಾಂಕಿನ ಹತೋಟಿಯ ಕಾರಣ ವಾಣಿಜ್ಯ ಬ್ಯಾಂಕುಗಳು ಹೆಚ್ಚು ಹೆಚ್ಚು ಅವಕಾಶ ಎದುರಿಸುತ್ತಿರುವುದರಿಂದ ಜನರು ಸಹಕಾರ ಸಂಸ್ಥೆಗಳನ್ನು ಬೆಳೆಸಿಕೊಳ್ಳಬೇಕೆಂದರು.

ಎಂ.ಕೆ. ಶ್ರೀಮನ್ನಾ ಸ್ವಾಗತಿಸಿದರು ಶಾಖಾ ಮೇಲ್ವಿಚಾರಕ ಕೃಷ್ಣ ಭಟ್ ವಂದಿಸಿದರು.

೬ ಜನರಿಗೆ ಒಟ್ಟು ಸುಮಾರು ೬ ಸಾವಿರ ರೂ. ಗಳ ಸಾಲ ಹಂಚಲಾಯಿತು.

ಈ ಸೌಲಭ್ಯ ಪ್ರತಿ ಮಂಗಳವಾರ ಮತ್ತು ಗುರುವಾರಗಳಂದು ಜಾರಿಯಲ್ಲಿರುತ್ತದೆಂದು ಮ್ಯಾನೇಜರ್ ಜಿ. ಎಸ್. ಕೃಷ್ಣೇಗೌಡ ತಿಳಿಸಿದ್ದಾರೆ.

## ತೀರ್ಥಹಳ್ಳಿ ತಾಲ್ಲೂಕು ಕೃಷಿ ಕಾರ್ಮಿಕರ ಸಭೆ

ತೀರ್ಥಹಳ್ಳಿ ತಾಲ್ಲೂಕು ಕೃಷಿ ಮತ್ತು ಇತರ ಕೂಲಿಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆ ಎನ್. ರಾಜೀವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಟ್ಟೆಹಕ್ಲು ಗ್ರಾಮದಲ್ಲಿ ೮. ೮ರಂದು ನಡೆಯಿತು.

ತೀರ್ಥಹಳ್ಳಿ ತಾಲ್ಲೂಕಿನ ಶೇಡ್ಗಾರು ಪಂಚಾಯ್ತಿಗೆ ಸೇರಿದ ಅಂಗಳಗುಡಿಗೆ ಗ್ರಾಮದ ಜಿ. ಪುರುಷೋತ್ತಮಗೌಡ ಮತ್ತು ಇತರರು ಸುತ್ತಮುತ್ತಲ ಗ್ರಾಮದ ಕೃಷಿ ಕಾರ್ಮಿಕರಿಗೆ ಒಡ್ಡುತ್ತಿರುವ ಬೆದರಿಕೆಯನ್ನು ಸಭೆ ಗಮನಿಸಿ ಈ ವಿಚಾರದಲ್ಲಿ ಮೇಲಾಧಿಕಾರಿಗೆ ದೂರು ಸಲ್ಲಿಸುವಂತೆ ತೀರ್ಮಾನಿಸಲಾಯಿತು. ಇದೇ ತಾಲ್ಲೂಕಿನ ಹೊಸಕೇರಿ ಗ್ರಾಮದ ಪುಟ್ಟನಾಯ್ಕ ಎಂಬ ನಿರ್ಗತಿಕ ಕೃಷಿ ಕಾರ್ಮಿಕನ ಕುಟುಂಬದವರ ಮೇಲೆ ಭೂಮಾಲೀಕರು ನಡೆಸಿದ ಹಲ್ಲೆಯನ್ನು ಸಭೆಯಲ್ಲಿ ಖಂಡಿಸಲಾಯಿತು.

ತರೀಕೆರೆ ಸೇಂದಿ ಡಿಪೋ ಕಾರ್ಮಿಕರು ಸರ್ಕಾರ ನಿಗದಿ ಮಾಡಿದ ಕನಿಷ್ಠ ಕೂಲಿಗಾಗಿ ಒತ್ತಾಯಿಸಿ ಶಾಂತಿಯುತ ಮತ ಪ್ರದರ್ಶನ ನಡೆಸುತ್ತಿದ್ದಾಗ ಪೋಲೀಸರು ಮಹಿಳೆಯರನ್ನೊಳಗೊಂಡ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಿದ ಅಮಾನುಷ ಕ್ರಮವನ್ನು ಖಂಡಿಸುವ ನಿರ್ಣಯವನ್ನು ಸಭೆ ಕೈಗೊಂಡಿತು.

ವ್ಯವಸಾಯ ಯೋಗ್ಯವಾಗಿರುವ ಅಂಗಳಗುಂಡಿಗೆ ಗ್ರಾಮದ ಸರ್ವೆ ನಂ.೧೩ರಲ್ಲಿರುವ ಜಮೀನನ್ನು ಶ್ರೀಮಂತರ ಅಡೆತಡೆಗಳನ್ನು ಲೆಕ್ಕಿಸದೆ ಭೂ ರಹಿತ ಕೃಷಿ ಕಾರ್ಮಿಕರು ಸಾಗುವಳಿಯನ್ನು ಮುಂದುವರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ವಿ. ಕೆ. ನಾಗೇಶ ಕರೆ ನೀಡಿದರು.

# ವಿವಿಧೆಡೆ ಸ್ವಾತಂತ್ರ್ಯೋತ್ಸವ

### ಶೃಂಗೇರಿ

ಪುರಃಭಾ ಭವನದಲ್ಲಿ ೩೬ನೆಯ ಸ್ವಾತಂತ್ರ್ಯೋತ್ಸವ ಸಮಾರಂಭ ನಡೆಯಿತು. ಧ್ವಜಾರೋಹಣ ಮಾಡಿದ ಶಿರಸ್ತೆದಾರ್ ಹೊನ್ನೇಗೌಡ ಮಾತನಾಡಿ ವಿದ್ಯಾರ್ಥಿಗಳು ಚೆನ್ನಾಗಿ ಓದಬೇಕು; ದೊಡ್ಡವರು ತಮ್ಮ ಕೆಲಸವನ್ನು ಸರಿಯಾಗಿ ಮಾಡಬೇಕೆಂದು ಕರೆಕೊಟ್ಟರು. ಸಂಜೆ ಮನರಂಜನಾ ಕಾರ್ಯಕ್ರಮವಿತ್ತು. ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲೆಯ ಬಾಲಕೃಷ್ಣರವರು ಬಹುಮಾನ ವಿತರಣೆ ಮಾಡಿದ ಈ ಸಭೆಯ ಅಧ್ಯಕ್ಷತೆ ಇಲ್ಲಿನ ಸಹಾಯಕ ವಿದ್ಯಾಧಿಕಾರಿ ಟಿ. ಭೀಮಪ್ಪನವರು ವಹಿಸಿದ್ದರು. ಮನರಂಜನಾ ಕಾರ್ಯಕ್ರಮಕ್ಕೆ ಬಹಳ ಜನ ಸೇರಿದ್ದರು.

### ಮೈತ್ರಿ ಮಹಿಳಾ ಸಮಾಜ

ಇದೇ ತಾ. ೧೫-೮-೮೨ರಂದು ಗುಡ್ಡೇತೋಟ ಮೈತ್ರಿ ಮಹಿಳಾ ಸಮಾಜದಲ್ಲಿ ಸ್ವಾತಂತ್ರ್ಯೋತ್ಸವವನ್ನು ಅತ್ಯುತ್ಸಾಹದಿಂದ ಪಂಚಾಯಿತಿ ಅಧ್ಯಕ್ಷರಾದ ಐ.ಹೆಚ್ ಮೊಹಿದ್ದೀನ್ ರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು

ಮಹಿಳಾ ಸಮಾಜದ ಅಧ್ಯಕ್ಷಿಣಿ ಪದ್ಮಾ ಅನಂತರಾವ್ ಸ್ವಾಗತಿಸಿದರು. ಕು||ರಾಜೇಶ್ವರಿ ಮತ್ತು ಸಂಗಡಿಗರಿಂದ ಕೋಲಾಟ, ಲೇಜಿಮ್, ಮತ್ತು ಭಕ್ತಿಗೀತೆಗಳು, ಕು|| ಶೈಲಾ ಮತ್ತು ಸಂಗಡಿಗರಿಂದ ಜನಪದ ಗೀತೆಗಳು; ಕು|| ನಾಗರತ್ನ ಸಂಗಡಿಗರ ಭಾವಗೀತೆಗಳು ಹಾಗೂ ಶ್ರೀಮತಿ ಶಾಂತಾ ಕೃಷ್ಣಮೂರ್ತಿ ಇವರ ಹಿನ್ನಲೆ ಗಾಯನದಲ್ಲಿ ಕು|| ಗೀತಾ ಮತ್ತು ಸಂಗಡಿಗರಿಂದ ನೃತ್ಯ ಪ್ರದರ್ಶನ ನಡೆದವು.

ಅತಿಥಿಗಳಾಗಿದ್ದ ಜಿ.ಎಸ್. ಅನಂತರಾವ್ ರವರು ಸ್ವಾತಂತ್ರ್ಯೋತ್ಸವದ ಬಗ್ಗೆ ಮಾತನಾಡಿದರು.

ಕಾರ್ಯದರ್ಶಿ ಕು|| ಜಿ. ಟಿ. ನಾಗರತ್ನ ಅವರು ವಂದನಾರ್ಪಣೆ ಮಾಡಿದರು.

### ಅಸನಬಾಳು, ಶೃಂಗೇರಿ ತಾಲ್ಲೂಕು

ತಾ. ೧೫-೮-೮೨ರಂದು ಅಸನಬಾಳು ಕೆರೆಯ ಪ್ರಾಥಮಿಕ ಶಾಲೆಯಲ್ಲಿ ಹುಕ್ಕಳಿ ಹೆಚ್.ಜಿ. ಮಲ್ಲಪ್ಪನಾಯ್ಕರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯದಿನೋತ್ಸವವನ್ನು ಆಚರಿಸಲಾಯಿತು. ಎಂ. ಆರ್. ಸುಧಾಕರ್‌ರವರು ಧ್ವಜಾರೋಹಣ ಮಾಡಿದರು. ದ್ಯಾವಪ್ಪನವರು ಸ್ವಾತಂತ್ರ್ಯೋತ್ಸವದ ಬಗ್ಗೆ ಭಾಷಣ ಮಾಡಿದರು. ಶಾಲಾ ಉಪಾಧ್ಯಾಯರಾದ ಎ. ಸಿದ್ದರಾಮಪ್ಪನವರು ಸ್ವಾಗತ ಮತ್ತು ವಂದನಾರ್ಪಣೆ ಮಾಡಿದರು. ಕೊನೆಯಲ್ಲಿ ಶಾಲಾಭಿವೃದ್ಧಿ ಸಮಿತಿ ವತಿಯಿಂದ ಮಕ್ಕಳಿಗೆ ಸಿಹಿ ಹಂಚಲಾಯಿತು.

### ಕೊಪ್ಪ ಪ್ರಧಾನ ಅಂಚೆ ಕಚೇರಿ

ಕೊಪ್ಪ ಪ್ರಧಾನ ಅಂಚೆ ಕಛೇರಿಯಲ್ಲಿ ತಾ. ೧೫-೮-೮೨ರ ದಿನದಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಕು| ಸವಿತ ಹಾಗೂ ಕು|| ಅಂಬಾ ಭವಾನಿಯವರ ಪ್ರಾರ್ಥನೆಯೊಂದಿಗೆ ಸಮಾರಂಭ ಪ್ರಾರಂಭವಾಯಿತು.

ಅಧ್ಯಕ್ಷತೆಯನ್ನು ವಹಿಸಿದ್ದ ಪೋಸ್ಟ್ ಮಾಸ್ಟರ್ ಲಕ್ಷ್ಮಿನಾರಾಯಣ್ ರವರು ಸಭೆಯನ್ನು ಉದ್ದೇಶಿಸಿ ಸ್ವಾತಂತ್ರ್ಯ ದಿನಾಚರಣೆಯ ದಿನದ ಬಗ್ಗೆ ಮಾತನಾಡಿದರು. ಕೆ. ಆರ್. ಎಸ್. ಭಟ್ ಸ್ವಾಗತ ಬಯಸಿ, ಬಿ.ಎಸ್. ನಾಗರಾಜ್ ರವರು ವಂದನಾರ್ಪಣೆ ಮಾಡಿದರು.

### ಗುಣವಂತೆ ಬಡಾವಣೆಯ ಕಿ.ಪ್ರಾ.ಶಾಲೆ

ದಿನಾಂಕ ೧೫-೮-೮೨ರಂದು ೩೬ ನೇಯ ಸ್ವಾತಂತ್ರ್ಯ ದಿನಾಚರಣೆಯನ್ನು ಗುಣವಂತೆ ಬಡಾವಣೆಯ ಸ.ಕಿ.ಪ್ರಾ. ಶಾಲೆಯಲ್ಲಿ ವೈಭವದಿಂದ ಆಚರಿಸಲಾಯಿತು.

ಗ್ರಾಮ ಪಂಚಾಯ್ತಿ ಸದಸ್ಯರೂ, ಶಾಲಾಭಿವೃದ್ಧಿ ಸಮಿತಿ ಸದಸ್ಯರೂ ಆಗಿರುವ ಶ್ರೀ ಪೈ. ಎ. ಹುಸೇನಬ್ಬ ಇವರಿಂದ ಧ್ವ ರೋಹಣ ಮತ್ತು ಸಿಹಿ ಹಂಚಿಕೆ ನ ಲಾಯಿತು.

ತಾಲ್ಲೂಕು ಅಭಿವೃದ್ಧಿ ಮಂಡಳಿ ಸದ ರೂ, ಗ್ರಾಮ ಪಂಚಾಯ್ತಿ ಸದಸ್ಯರೂ ಹಾ ಗೂ ಶಾಲಾಭಿವೃದ್ಧಿ ಸಮಿತಿ ಸದಸ್ಯರೂ ಆ ರುವ ಶ್ರೀ ಜಿ. ಎಸ್. ಶ್ರೀನಿವಾಸ್ ಇವ ಅಧ್ಯಕ್ಷತೆ ವಹಿಸಿದ್ದರು. ದೇವತಾ ಪ್ರಾರ್ಥ ಯೊಂದಿಗೆ ಶಾಲಾ ಮಕ್ಕಳಿಂದ ಸಾಂಸ್ಕೃತಿ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಸಹೋಪಾಧ್ಯಾಯರಾದ ಶ್ರೀ ವಿ. ಕೃ ಇವರು ಸರ್ವರನ್ನೂ ಸ್ವಾಗತಿಸಿದರು ಮುಖ್ಯೋಪಾಧ್ಯಾಯರಾದ ಶ್ರೀ ಪಾಲ ಗೊನ್ಸಾಲ್ವೀಸ್ ಇವರು ಸರ್ವರನ್ನೂ ವಂ ಸಿದರು.

### ಗುಡ್ಡೇತೋಟ ಗ್ರಾಮ ಪಂಚಾಯ್ತಿ

ದಿನಾಂಕ ೧೫-೮-೮೨ರ ಬೆಳಿಗ್ಗೆ ೮ ಗ ಟೆಗೆ ರಾಷ್ಟ್ರಧ್ವಜಾರೋಹಣವನ್ನು ಪಂಚಾ ಯ್ತಿ ಅಧ್ಯಕ್ಷರಾದ ಐ. ಹೆಚ್. ಮೊಹಿದ್ದೀ ರವರು ನೆರವೇರಿಸಿದರು. ನಂತರ ಪಂಚಾ ಯ್ತಿ ಆವರಣದಲ್ಲಿ ಸೇರಿದ ಸಭೆಯ ಅಧ್ಯ ತೆಯನ್ನು ಮೊಹಿದ್ದೀನ್‌ರವರು ವಹಿಸಿದ್ದರು ನಂತರ ಪಂಚಾಯ್ತಿ ಆದಾಯದ ಶೇ ೧೮ ನಿಧಿಯ ವತಿಯಿಂದ ೭೪ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಬಟ್ಟೆಗಳ ನ್ನು ಹಂಚಲಾಯ್ತು. ಮೈತ್ರಿ ಮಹಿಳಾ ಸಮಾಜದಿಂದ ವಿವಿಧ ವಿನೋದಾವಳಿಗಳು ನಡೆದವು.

## ಪ್ರಕಟಣೆ

ವಿ ಪಿ ನಂ. 11/82–83 ದಿನಾಂಕ 17–8–82

ವಿಷಯ:– ಗುಡ್ಡೇತೋಟ ಗ್ರಾಮದಲ್ಲಿ ಜಾನುವಾರು ದೊಡ್ಡಿಯನ್ನು ಪ್ರಾರಂಭಿಸುವ ಬಗ್ಗೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕರ್ನಾಟಕ ದನಗಳ ಅತಿಕ್ರಮಣ ಅಧಿನಿಯಮ 1966ರ ಪ್ರಕರಣ 3 (2) ಮತ್ತು 4 ರ ಪ್ರಕಾರ ಚಿಕ್ಕಮಗಳೂರು ಜಿಲ್ಲಾ ಕೊಪ್ಪ ತಾಲ್ಲೂಕು ಮೇಗುಂದಾ ಹೋಬಳಿ ಗುಡ್ಡೇತೋಟ ಗ್ರಾಮ ಪಂಚಾಯ್ತಿಗೆ ಸೇರಿರುವ ಗುಡ್ಡೇತೋಟ ಗ್ರಾಮದಲ್ಲಿ ಒಂದು ಜಾನುವಾರು ದೊಡ್ಡಿಯನ್ನು ಸ್ಥಾಪಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿರುತ್ತೆ. ಈ ಬಗ್ಗೆ ಯಾರದ್ದಾದರೂ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮೂಲಕ ಈ ಪ್ರಕಟಣೆಯಾದ ಹದಿನೈದು ದಿವಸದೊಳಗೆ ಈ ಕಚೇರಿಗೆ ತಲುಪುವಂತೆ ಕಳುಹಿಸಿಕೊಡಬಹುದಾಗಿರುತ್ತೆ. ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳ ಬಗ್ಗೆ ಗಮನ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ದೊಡ್ಡಿಗೆ ದಾಖಲಾಗುವ ಜಾನುವಾರುಗಳ ಉತ್ಸುವಾರಿ ನೋಡಿಕೊಳ್ಳುವ ಬಗ್ಗೆ ಈ ಕೆಳಗಿನಂತೆ ದರಗಳನ್ನು ವಿಧಿಸಲಾಗುವುದು:–

| | | ಪ್ರತಿ ಜಾನುವಾರುಗಳಿಗೆ |
|---|---|---|
| 1) | ಎಮ್ಮೆಗಳು ಮತ್ತು ಕೋಣಗಳು, ಎತ್ತುಗಳು, ಹಂದಿಗಳು, ಕತ್ತೆಗಳು, ಕುದುರೆಗಳು, ಇತ್ಯಾದಿ ಜಾನುವಾರುಗಳು ದಿನ ಒಂದಕ್ಕೆ | 3 ರೂ. |
| 2) | ಕರುಗಳು, ಕುರಿಗಳು, ಆಡುಗಳು, ಟಗರುಗಳು' ಮೇಕೆಗಳು, ಹೋತಗಳು ಇತ್ಯಾದಿ ದಿನ ಒಂದಕ್ಕೆ | 1 ರೂ. |

(ಸಹಿ) ಐ. ಹೆಚ್. ಮೊಹಿದ್ದೀನ್.
ಅಧ್ಯಕ್ಷರು, ಗುಡ್ಡೇತೋಟ ಪಂಚಾಯ್ತಿ.

## ಚಾವಲ್ಮನೆ ಗ್ರಾಮ ಪಂಚಾಯ್ತಿ ಕಮ್ಮರಡಿ

ಗಾಳಿ ಮರಗಳು ಹರಾಜಿಗಿರುತ್ತೆ. ಆಸ ಕ್ತಿ ಉಳ್ಳವರು ಪಂಚಾಯ್ತಿ ಕಚೇರಿ ವೇಳೆ ಯಲ್ಲಿ ಸಂಬಂಧಪಟ್ಟವರನ್ನು ಸಂಪರ್ಕಿಸಿ ಮರಗಳನ್ನು ಪರೀಕ್ಷಿಸಬಹುದು. ಹರಾಜಿನ ದಿನಾಂಕವನ್ನು ಮುಂದೆ ತಿಳಿಸಲಾಗುತ್ತದೆ.

**ಅಧ್ಯಕ್ಷರು ಮತ್ತು ಸದಸ್ಯರು**
ಚಾವಲ್ಮನೆ ಗ್ರಾಮ ಪಂಚಾಯ್ತಿ,
ಕಮ್ಮರಡಿ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.